ಒ.ಎಸ್. - 34/2020

ಪಿ.ಡಬ್ಲ್ಯು - 01

**ದಿನಾಂಕ 21-02-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲು - 1 ಮತ್ತು 6 ನೇ ಪ್ರತಿವಾದಿಯರ ಪರ ವಕೀಲರಿಂದಃ**

ಒಂದನೇ ಪ್ರತಿವಾದಿ ಹೆಂಡತಿಯ ತಾಯಿ ಕೂಡ ಈಗ ಬೆಂಗಳೂರಿಗೆ ಹೋಗಿ ವಾಸವಾಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ . ಒಂದನೇ ಪ್ರತಿವಾದಿಯ ಮಗನ ಜನನ ಪ್ರಮಾಣ ಪತ್ರದಲ್ಲಿ ಐಟಂ ನಂ 3 ಅಂದರೆ ಮಂಗಳೂರಿನ flat ನ ವಿಳಾಸವನ್ನೇ ಕಾಣಿಸಲಾಗಿದೆ ಎಂದರೆ ನನಗೆ ಗೊತ್ತಿಲ್ಲ . ಅದೇ ರೀತಿ ಒಂದನೇ ಪ್ರತಿವಾದಿಯ ಮಗನ ಶಾಲಾ ದಾಖಲಾತಿಗಳಲ್ಲಿ ಕೂಡ ಐಟಂ ನಂ 3 ಅಂದರೆ ಮಂಗಳೂರಿನ flat ನ ವಿಳಾಸವನ್ನೇ ಕಾಣಿಸಲಾಗಿದೆ ಎಂದರೆ ಸಾಕ್ಷಿ ಅದೇ ಬಿಲ್ಡಿಂಗ್ ನಲ್ಲಿ ಒಂದನೇ ಪ್ರತಿವಾದಿಯ ಹೆಂಡತಿಯ ಮತ್ತೊಂದು flat ಇತ್ತು ಎಂದು ತಿಳಿಸಿರುತ್ತಾರೆ . flat No.402 ವಿಳಾಸವನ್ನೇ ಈ ಮೇಲೆ ಹೇಳಿದ ಎರಡು ದಾಖಲೆಗಳಲ್ಲಿ ಕಾಣಿಸಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ಒಂದನೇ ಪ್ರತಿವಾದಿಯ ಹೆಂಡತಿ ಎಜೆ ಆಸ್ಪತ್ರೆಯಲ್ಲಿ ಕೆಲಸ ಮಾಡುವಾಗಲೂ ಕೂಡ ಮೇಲ್ಕಂಡ flat no. 402 ವಿಳಾಸದಲ್ಲಿಯೇ ವಾಸವಾಗಿದ್ದರು ಮತ್ತು ಅದೇ ವಿಳಾಸವನ್ನೇ ಕಾಣಿಸಿದ್ದಾರೆ ಎಂದರೆ ಸರಿಯಲ್ಲ. ನಾನು ಸದ್ರಿ ದಾಖಲೆಗಳನ್ನು ನೋಡಿಲ್ಲ. ಒಂದನೇ ಪ್ರತಿವಾದಿಯ ಮಗು ಯಾವ ಶಾಲೆಗೆ ಹೋಗುತಿತ್ತು ಎಂದು ನನಗೆ ಗೊತ್ತಿಲ್ಲ. ನಾನು ಒಂದನೇ ಪ್ರತಿವಾದಿ ನನ್ನ ಅಣ್ಣನಿಗೆ ಬರೆದುಕೊಟ್ಟ ಜಿಪಿಎಗಳಲ್ಲಿ ಐಟಂ ನಂ 3 ಆಸ್ತಿಯನ್ನು ಕಾಣಿಸಿದ್ದೇನೋ ಇಲ್ಲವೋ ನೆನಪಿಲ್ಲ. ನೀವು ಮಾಡಿಕೊಂಡ ಪಾಲುಪಟ್ಟಿ ಅಂದರೆ ನಿಪಿ 90 ರಲ್ಲಿ ಐಟಂ ನಂ 3 ಆಸ್ತಿಯನ್ನು ಕಾಣಿಸಿದೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಅದನ್ನು ಕಾಣಿಸಿಲ್ಲ ಆದರೇ ಪಾಲುಪಟ್ಟಿಯನ್ನು ಒಂದನೇ ಪ್ರತಿವಾದಿ ನನ್ನ ಅಣ್ಣನೇ ಮಾಡಿಸಿದ್ದಾನೆ ಎಂದು ತಿಳಿಸಿರುತ್ತಾರೆ. ಸಾಕ್ಷಿ ಪುನಃ ಮುಂದುವರಿದು 2003-04 ರಲ್ಲಿ ಆದಾಯ ತೆರಿಗೆ ಇಲಾಖೆಯಿಂದ ಸರ್ವೆ ಮಾಡಿಸಲು ಮತ್ತು ಆದಾಯ ತೆರಿಗೆ ಇಲಾಖೆಯವರು ತನಿಖೆ ಮಾಡುವ ಸಮಯದಲ್ಲಿ ನಿಪಿ 90 ಪಾಲುಪಟ್ಟಿಯನ್ನು ಮಾಡಿಸಲಾಯಿತು. ನಿಪಿ-90 ಪಾಲುಪಟ್ಟಿಯನ್ನು ನಾನು ಮತ್ತು ನನ್ನ ಮತ್ತೊಬ್ಬ ಸಹೋದರ ನಂದಾಗೋಪಾಲ್ ಮಾಡಿಕೊಂಡಿರುತ್ತೇವೆ .

ದಾವಾ ಸ್ವತ್ತಿನ ಐಟಂ ನಂ 7 ರಿಂದ 16 ಸ್ವತ್ತುಗಳನ್ನು 10 ಕ್ರಯಪತ್ರಗಳ ಮುಖೇನ ಅಂದಾಜು 2.5 ಎಕ್ರೆ ರಷ್ಟು ಜಾಗವನ್ನು ಖರೀದಿಸಲಾಗಿದೆ. 10 ಕ್ರಯಪತ್ರಗಳನ್ನು ನ್ಯಾಯಲಯಕ್ಕೆ ಕೊಟ್ಟಿದೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ನೆನಪಿಲ್ಲ ಎಂದು ತಿಳಿಸಿರುತ್ತಾರೆ . ದಾವಾ ಐಟಂ ನಂ 7 ರಿಂದ 16 ಸ್ವತ್ತಿಗೆ ಸಂಬಂದಪಟ್ಟ ಆದ ನಿಪಿ-92 ರಿಂದ 97 ಮತ್ತು 101 ಕ್ರಯಪತ್ರಗಳನ್ನು ನಾನು ಒಪ್ಪುತ್ತೇನೆ ಆದರೇ ಅದರಲ್ಲಿ ಕಾಣಿಸಿರುವ ಕ್ರಯದ ಮೊಬಲಗನ್ನು ನಾನು ಒಪ್ಪವುದಿಲ್ಲ. ಸದ್ರಿ ಕ್ರಯಪತ್ರಗಳು ಯಾರ ಹೆಸರಿನಲ್ಲಿ ಇದೆ ಮತ್ತು ಖರೀದಿಸಲಾಗಿದೆ

ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ನನ್ನ ತಾಯಿ ಮತ್ತು ಒಂದನೇ ಪ್ರತಿವಾದಿಯಾದ ನನ್ನ ಅಣ್ಣನ ಹೆಸರಿನಲ್ಲಿ ಖರೀದಿಸಲಾಗಿದೆ ಎಂದು ತಿಳಿಸಿರುತ್ತಾರೆ. ಸಾಕ್ಷಿ ಮುಂದುವರಿದು ಸುಂದರ್ ಶೆಟ್ಟಿ ಎನ್ನುವವರ ಜೊತೆ ಸೇರಿ ಸ್ವಲ್ಪ ಆಸ್ತಿಯನ್ನು ಖರೀದಿಸಲಾಗಿದೆ ಎಂದು ತಿಳಿಸಿರುತ್ತಾರೆ. ಯಾವುದಾದರೂ ಕ್ರಯಪತ್ರವನ್ನು ನಿಮ್ಮ ಅಣ್ಣನ ಹೆಸರಿನಲ್ಲಿ ವೈಯಕ್ತಿಕವಾಗಿ ಖರೀದಿಸಲಾಗಿದೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ನನಗೆ ನೆನಪಾಗುತ್ತಿಲ್ಲ ನೋಡಬೇಕು ಎಂದು ತಿಳಿಸಿರುತ್ತಾರೆ. ಸಾಕ್ಷಿ ಮುಂದುವರಿದು ಒಟ್ಟು ಕುಟುಂಬದ ಹಣದಲ್ಲಿ ಖರೀದಿಸಲಾಗಿದೆ. ಸಾಕ್ಷಿಗೆ ನಿಪಿ 92 ರಿಂದ 97 ಮತ್ತು 101 ನ್ನು ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ ಅದು ಒಂದನೇ ಪ್ರತಿವಾದಿಯಾದ ನನ್ನ ಅಣ್ಣನ ಹೆಸರಿನಲ್ಲಿ ಇದೆ ಎಂದು ತಿಳಿಸಿರುತ್ತಾರೆ. ಕ್ರಯಪತ್ರಗಳ ಆದಾರದಲ್ಲಿ ಆಸ್ತಿಗಳಿಗೆ ಸಂಬಂಧಪಟ್ಟಂತ ಪಹಣಿ ಪತ್ರಿಕೆಗಳು ಒಂದನೇ ಪ್ರತಿವಾದಿಯ ಹೆಸರಿನಲ್ಲಿ ಆಗಿದೆ ಎಂದರೆ ಸರಿ. ನಿಪಿ 6 ರಿಂದ 16 ಐಟಂ ನಂ 7 ರಿಂದ 16 ಕ್ಕೆ ಸಂಬಂದಪಟ್ಟ ಪಹಣಿ ಪತ್ರಿಕೆಗಳು ಎಂದರೆ ಸರಿ ಮತ್ತು ಅವುಗಳನ್ನು ನಾನೇ ಹಾಜರುಪಡಿಸಿದ್ದೇನೆ ಎಂದರೆ ಸರಿ. ಪಹಣಿ ಪತ್ರಿಕೆಗಳಲ್ಲಿ ಇರುವ ಒಕ್ಕಣೆಗಳನ್ನು ನಾನು ಒಪ್ಪುತ್ತೇನೆ . ಖರೀದಿ ಲಗಾಯಿತಿನಿಂದ ಐಟಂ ನಂ 7 ರಿಂದ 16 ಆಸ್ತಿಗಳನ್ನು ಒಂದನೇ ಪ್ರತಿವಾದಿ ಸ್ವಾಧೀನ ಹೊಂದಿ ಅನುಭವಿಸಿಕೊಂಡು ಬರುತಿದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದವರಿದು ನಾವೆಲ್ಲರೂ ಒಟ್ಟಿಗೆ ಅನುಭವಿಸಿಕೊಂಡು ಬರುತಿದ್ದೇವೆ ಎಂದು ತಿಳಿಸಿರುತ್ತಾರೆ . ನಿಪಿ 93 ಮತ್ತು 95 ಕ್ರಯಪತ್ರಗಳನ್ನು ಮಾರಾಟಗಾರರ ಎಜೆಂಟ್ ಆಗಿ ನನ್ನ ತಾಯಿ ನನ್ನ ಅಣ್ಣನಿಗೆ ಬರೆದುಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ಒಂದನೇ ಪ್ರತಿವಾದಿಯಾದ ನನ್ನ ಅಣ್ಣನೇ ಹೇಗೆ ಬೇಕೋ ಹಾಗೇ ಮಾಡಿಸಿಕೊಂಡಿದ್ದಾರೆ ಎಂದು ತಿಳಿಸಿರುತ್ತಾರೆ . ನಿಪಿ 93, 95 ಮತ್ತು 97 ಕ್ರಯಪತ್ರಗಳಿಗೆ ನಾನೇ ಸಾಕ್ಷಿದಾರನಾಗಿ ಸಹಿ ಮಾಡಿದ್ದೇನೆ ಎಂದರೆ ಸರಿ . ಕ್ರಯಪತ್ರಗಳಿಗೆ ಒಂದನೇ ಪ್ರತಿವಾದಿಯ ಖಾತೆಯಿಂದ ಹಣ ಪಾವತಿಯಾಗಿದೆ ಎಂದರೆ ಸಾಕ್ಷಿ ಅವರ ಖಾತೆಯಿಂದ ವರ್ಗಾವಣೆ ಆಗಿದೆ ಸದ್ರಿ ಹಣ ನಮ್ಮ ಒಟ್ಟು ಕುಟುಂಬದ ಹಣ ಎಂದು ತಿಳಿಸಿರುತಾರೆ. ಪುನಃ ಮುಂದುವರಿದು ನಮ್ಮ ಆಸ್ತಿಗಳನ್ನು ಮಾರಾಟ ಮಾಡಿದಾಗ ಬಂದ ಹಣದಿಂದ ಪಾವತಿಸಲಾಗಿದೆ ಎಂದು ತಿಳಿಸಿರುತ್ತಾರೆ. ಕುಟುಂಬದ ಹಣ ಪಾವತಿಸಲಾಗಿದೆ ಎನ್ನುವ ಬಗ್ಗೆ ದಾಖಲೆ ಇದೆಯಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಯಾರಿಗೂ ಕೆಲಸ ಇರಲಿಲ್ಲ ಬೇರೆ ಆದಾಯ ಇರಲಿಲ್ಲ ಆದ್ದರಿಂದ ಕುಟುಂಬದ ಹಣದಿಂದಲೇ ಖರೀದಿಸಲಾಗಿದೆ ಎಂದು ತಿಳಿಸಿರುತ್ತಾರೆ. ಆದರೇ ನನ್ನ ಬಳಿ ದಾಖಲೆ ಇಲ್ಲ ಎಂದು ತಿಳಿಸಿರುತ್ತಾರೆ. ಒಂದನೇ ಪ್ರತಿವಾದಿಯ ಖಾತೆಗೆ ಎಷ್ಟು ಹಣ ಜಮೆ ಆಗಿದೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ 2020 ರವರೆಗೆ ನಾನು ನೋಡಿಲ್ಲ ಎಲ್ಲವನ್ನು ಒಂದನೇ ಪ್ರತಿವಾದಿ ನೋಡಿಕೊಳ್ಳುತಿದ್ದರು ಎಂದು ತಿಳಿಸಿರುತ್ತಾರೆ. ಈ ಎಲ್ಲಾ ಕ್ರಯಪತ್ರಗಳು ಜುಲೈ 2009 ರಿಂದ ಡಿಸೆಂಬರ್ 2009 ರವರೆಗೆ ಆಗಿದೆ ಎಂದರೆ ಸರಿ. ಎಲ್ಲಾ ಕ್ರಯಪತ್ರಗಳ ಒಟ್ಟು ಕ್ರಯದ ಮೊತ್ತ ರೂ 50 ಲಕ್ಷ ಆಗಿರುತ್ತದೆ, ಆದರೇ ಪತ್ರದಲ್ಲಿ ರೂ 20 ಲಕ್ಷ ಎಂದು ಕಾಣಿಸಲಾಗಿದೆ ಎಂದು ತಿಳಿಸಿರುತ್ತಾರೆ. 13-08-2009 ರಂದು RTGS ಮೂಲಕ ಪ್ರಮೀಣ್ ಚೆರಿಯಾರ್ ರವರು 13,73,686/- ರೂ ಗಳನ್ನು ಒಂದನೇ ಪ್ರತಿವಾದಿಯಾದ ನನ್ನ ಅಣ್ಣನ ಖಾತೆ ಇರುವ ಆ್ಯಕ್ಸಿಸ್ ಬ್ಯಾಂಕ್ ಗೆ ಹಾಕಿದ್ದಾರೆ ಎಂದರೆ ನಾನು ನೋಡಿಲ್ಲ. ಸಾಕ್ಷಿ ಮುಂದುವರಿದು ನನ್ನ ಅಣ್ಣ ಕಪ್ಪು ಹಣವನ್ನು ಅವರಿಗೆ ಕೊಟ್ಟು ಅವರಿಂದ ಅಕೌಂಟ್ ಮೂಲಕ ಹಣ ಪಡೆದಿದ್ದಾರೆ ಎಂದು ತಿಳಿಸಿರುತಾರೆ. ಪ್ರಮೀಣ್ ಚೆರಿಯಾರ್ ಅಮೇರಿಕಾದಲ್ಲಿ ವಾಸವಾಗಿರುತ್ತಾರೆ ಎಂದರ ಸರಿ . ನಿಮ್ಮ ಅಣ್ಣ ಪ್ರಮೀಣ್ ಚೆರಿಯಾರ್ ರವರಿಗೆ ಕಪ್ಪು ಹಣವನ್ನು ಹೇಗೆ ಕಳುಹಿಸುತಿದ್ದರು / ಕೊಡುತಿದ್ದರು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಅವರು ಕೇರಳಕ್ಕೆ ಬರುತಿದ್ದರು ಆಗ ನನ್ನ ಅಣ್ಣ ಹೋಗುತಿದ್ದರು ಮತ್ತು ನಮ್ಮ ಮನೆಗೂ ಕೂಡ ಅವರು ಬರುತಿದ್ದರು ಎಂದು ತಿಳಿಸಿರುತ್ತಾರೆ . ಪ್ರಮೀಣ್

ಚೆರಿಯಾರ್ ರವರ ಪರಿಚಯ ಇದೆ ಅವರು ಮನೆಗೆ ಬಂದಾಗ ನೋಡಿರುತ್ತೇನೆ. ನಿಮ್ಮ ಅಣ್ಣ ಮತ್ತು ಪ್ರಮೀಣ್ ಚೆರಿಯಾದ್ ರವರು Medical Transcription ನ ವ್ಯವಹಾರ ಮಾಡುತಿದ್ದರು ಎಂದರೆ ಸಾಕ್ಷಿ ನನ್ನ ಅಣ್ಣ ಪಿಯುಸಿ ವರೆಗೆ ವ್ಯಾಸಾಂಗ ಮಾಡಿರುತ್ತಾರೆ. ಆದ್ದರಿಂದ ಅವರಿಗೆ Medical Transcription ಬಗ್ಗೆ ಹೇಗೆ ಗೊತ್ತು ಎಂದು ತಿಳಿಸಿ ನನ್ನ ಅಣ್ಣ ಕಪ್ಪು ಹಣವನ್ನು ಅವರಿಗೆ ಕೊಟ್ಟು ಬಿಳಿ ಹಣ ಮಾಡಲು ವ್ಯವಹಾರ ಮಾಡುತಿದ್ದರು ಎಂದು ತಿಳಿಸಿರುತ್ತಾರೆ . ಪ್ರಮೀಣ್ ಚೆರಿಯಾದ್ ಕೆಲವೊಮ್ಮೆ ನನ್ನ ಖಾತೆಗೆ ಕೂಡ ನನ್ನ ಅಣ್ಣನ ಪರವಾಗಿ ಹಾಕಿದ್ದರು ಎಂದರೆ ಸಾಕ್ಷಿ ನಾನು 2020 ರವರೆಗೆ ನೋಡಿಲ್ಲ ಅದು ಎಲ್ಲವನ್ನು ನನ್ನ ಅಣ್ಣ ನೋಡಿಕೊಳುತಿದ್ದರು ಮತ್ತು ಹಾಕಿಸಿರುತ್ತಾರೆ ಎಂದು ತಿಳಿಸಿರುತ್ತಾರೆ . ನಾನು ಪ್ರಮೀಣ್ ಚೆರಿಯಾದ್ ನ್ನು ನೋಡಲು ಕೇರಳಕ್ಕೆ ಹೋಗಿಲ್ಲ. ನಿಮ್ಮ ಅಣ್ಣ ಪ್ರಮೀಣ್ ಚೆರಿಯಾದ್ ಗೆ ಕಪ್ಪು ಹಣವನ್ನು ಕೊಡುವುದನ್ನು ನೋಡಿದೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ನಮ್ಮ ಮನೆಯಿಂದಲೇ ತೆಗೆದುಕೊಂಡು ಹೋಗುತಿದ್ದರು ನಾನೇ ಕೆಲವೊಮ್ಮೆ Railway Station ಬಿಟ್ಟು ಬಂದಿದ್ದೇನೆ ಎಂದು ತಿಳಿಸಿರುತ್ತಾರೆ. ನಾನು Railway station ಗೆ ಬಿಟ್ಟು ಬಂದಾಗ ನನ್ನ ಅಣ್ಣ ಎಷ್ಟು ಕಪ್ಪು ಹಣ ಕೊಟ್ಟಿದ್ದಾರೆ ಎಂದು ನನಗೆ ಗೊತಿಲ್ಲ ಕಾರಣ ಎಲ್ಲಾ ಲೆಕ್ಕಚಾರ ವ್ಯವಹಾರವನ್ನು ನನ್ನ ಅಣ್ಣನೇ ನೋಡಿಕೊಳ್ಳುತಿದ್ದರು ಎಂದು ತಿಳಿಸಿರುತ್ತಾರೆ . ನೀವು ನಿಮ್ಮ ಅಣ್ಣ ಮಾಡುತಿದ್ದ ಕಪ್ಪು ಹಣ ಚಲಾವಣೆ ಬಗ್ಗೆ ಆದಾಯ ತೆರಿಗೆ ಇಲಾಖೆ, ಪೊಲೀಸ್ ಅಥವಾ ಕೇಂದ್ರ ತನಿಖಾ ಸಂಸ್ಥೆಗೆ ದೂರು ಕೊಟ್ಟಿದೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ನಾವು ಒಟ್ಟಿಗೆ ಇದ್ದುದರಿಂದ ಮತ್ತು ನಮ್ಮ ನಡುವೆ ಯಾವುದೇ ತಕರಾರು ಇಲ್ಲದೇ ಇದ್ದುದರಿಂದ ನಾನು ಕೊಡಲಿಲ್ಲ ಎಂದು ತಿಳಿಸಿರುತ್ತಾರೆ. ನಿಮ್ಮ ಅಣ್ಣ ಖಾತೆಗೆ ಜಮೆ ಆದಎಲ್ಲಾ ಹಣ ಕಪ್ಪು ಹಣದಿಂದ ಮಾಡಿದ ಹಣವಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಸ್ವಲ್ಪ ಹಣ ಬಿಳಿ ಹಣ ಇರುತ್ತದೆ ಎಂದು ತಿಳಿಸಿರುತ್ತಾರೆ. ಒಂದನೇ ಪ್ರತಿವಾದಿ ಅವರ ಖಾತೆಯಲ್ಲಿ ಇರುವ ಎಲ್ಲಾ ವ್ಯವಹಾರವನ್ನು ಆದಾಯ ತೆರಿಗೆ ಇಲಾಖೆಗೆ ಸಲ್ಲಿಸುತಿದ್ದ ರಿಟನ್ಸ್ ನಲ್ಲಿ ಕಾಣಿಸುತಿದ್ದರು ಎಂದರೆ ಸರಿ . ಸಾಕ್ಷಿ ಮುಂದುವರಿದು ಆದಾಯ ತೆರಿಗೆ ಇಲಾಖೆಗೆ ರಿಟನ್ಸ್ ನಲ್ಲಿ ಕಾಣಿಸಲು ಈ ರೀತಿ ಖಾತೆಗೆ ಹಣ ಹಾಕಿಸುತಿದ್ದರು ಎಂದು ತಿಳಿಸಿರುತ್ತಾರೆ. ನಿಮ್ಮ ಕುಟುಂಬದ ಹಣ ನಿಮ್ಮ ಅಣ್ಣ ನ ಖಾತೆಗೆ ಯಾವಾಗ ಜಮೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ 1997 ರ ನಂತರ ಜಮೆ ಆಗುತ್ತಿತ್ತು ಎಂದು ತಿಳಿಸಿರುತ್ತಾರೆ . ಐಟಂ ನಂ 7 ರಿಂದ 16 ಸ್ವತ್ತುಗಳನ್ನು ಖರೀದಿಸುವ ಸಮಯದಲ್ಲಿ ನಿಮ್ಮ ಖಾತೆಯಲ್ಲಿ ನಿಮ್ಮ ತಾಯಿಯ ಖಾತೆಯಲ್ಲಿ ಮತ್ತು ನಿಮ್ಮ ತಮ್ಮ ನಂದಾಗೋಪಾಲ್ ನ ಖಾತೆಯಲ್ಲಿ ಎಷ್ಟು ಹಣ ಇತ್ತು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ನಾನು 2020 ರವರೆಗೆ ನನ್ನ ಖಾತೆಯ ಪಾಸ್ ಪುಸ್ತಕವನ್ನು ನೋಡಿಲ್ಲ ಯಾವುದೇ ದಾಖಲೆಯನ್ನು ನೋಡಿಲ್ಲ ಎಲ್ಲವನ್ನು ಒಂದನೇ ಪ್ರತಿವಾದಿ ನನ್ನ ಅಣ್ಣನೇ ನಿರ್ವಹಿಸುತಿದ್ದರು ಎಂದು ತಿಳಿಸಿರುತ್ತಾರೆ. ಈ ದಾವೆ ಹಾಕುವ ಪೂರ್ವದಲ್ಲಿ ಐಟಂ ನಂ 7 ರಿಂದ 16 ರವರಿಗಿನ ಆಸ್ತಿಗಳಿಗೆ ಸಂಬಂದಪಟ್ಟಂತೆ ಎಷ್ಟು ಕುಟುಂಬದ ಹಣವನ್ನು ಹಾಕಲಾಗಿದೆ ಎಂದು ನೋಡಿದೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ನಾನು ನೋಡಿಲ್ಲ, ಕಾರಣ ಈ ಮೊದಲೇ ಹೇಳಿದಂತೆ 2020 ರವರೆಗೆ ನಮ್ಮ ಎಲ್ಲಾ ಖಾತೆಯ ಲೆಕ್ಕವನ್ನು ನನ್ನ ಅಣ್ಣನೇ ನೋಡಿಕೊಳ್ಳುತಿದ್ದರು ಮತ್ತು ಬಾಯಿ ಮಾತಿನಲ್ಲಿ ನಮಗೆ ಹೇಳುತಿದ್ದರು . ಸಾಕ್ಷಿ ಪುನಃ ಮುಂದುವರಿದು ಆ ಎಲ್ಲಾ ಹಣ ಕೂಡ ಕುಟುಂಬದ ಹಣ ಎಂದು ತಿಳಿಸಿರುತ್ತಾರೆ . ಈ ಕೇಸು ಮಾಡುವಾಗ ಐಟಂ ನಂ 7 ರಿಂದ 16 ಕ್ಕೆ ಸಂಬಂದಪಟ್ಟಂತೆ ಕುಟುಂಬದ ಹಣವನ್ನು ಕೊಡಲಾಗಿದೆ ಎನ್ನುವ ಬಗ್ಗೆ ನಿಮ್ಮ ಬಳಿ ದಾಖಲೆ ಇದೆಯಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ದಾಖಲೆ ಇಲ್ಲ ಆದರೇ ನಮಗೆ ಯಾರಿಗೂ ಬೇರೆ ಆದಾಯ ಇರಲಿಲ್ಲ ಕುಟುಂಬದ ಆದಾಯ ಮಾತ್ರ ಇತ್ತು ಎಂದು ತಿಳಿಸಿರುತ್ತಾರೆ. ಐಟಂ ನಂ 7 ರಿಂದ 16 ನ್ನು ಖರೀದಿಸುವ ಸಮಯದಲ್ಲಿ ನನ್ನ

ತಂದೆ ಜೀವಂತವಾಗಿರಲಿಲ್ಲ . ಐಟಂ ನಂ 7 ರಿಂದ 16 ಕ್ಕೆ ಸಂಬಂದಪಟ್ಟ ಎಲ್ಲಾ ದಾಖಲೆಗಳು ಕೂಡ ಒಂದನೇ ಪ್ರತಿವಾದಿಯ ಹೆಸರಿನಲ್ಲಿ ಇದೆ ಎಂದರೆ ತಾತ್ಕಲಿಕವಾಗಿ ಮಾಡಲಾಗಿದೆ ಎಂದು ತಿಳಿಸಿರುತ್ತಾರೆ . ತಾತ್ಕಲಿಕ ಎಂದರೆ ಏನು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಭಾಗ ಮಾಡಿಕೊಳ್ಳುವರೆಗೆ ಆ ರೀತಿ ಇರಲಿ ಎಂದು ಹೇಳಿದ್ದರು ಎಂದು ತಿಳಿಸಿರುತ್ತಾರೆ. ಭಾಗ ಮಾಡಿಕೊಳ್ಳುವರೆಗೆ ಎಂದು ಒಂದನೇ ಪ್ರತಿವಾದಿಯಾದ ನನ್ನ ಅಣ್ಣ ಹೇಳಿರುತಾರೆ ಆಗ ನನ್ನ ತಾಯಿ ಕೂಡ ಇದ್ದರು. ಮತ್ತೊಬ್ಬ ಸಹೋದರ ನಂದಾಗೋಪಾಲ್ ಕೂಡ ಇದ್ದರು . ಆ ರೀತಿ ಹೇಳಿದ ಬಗ್ಗೆ ನಾನು ದಾಖಲೆ ಮಾಡಿಕೊಳ್ಳಲಿಲ್ಲ . ಆ ಸಮಯದಲ್ಲಿ ಯಾವುದೇ ತಕರಾರು ಇರಲಿಲ್ಲ ಆದ್ದರಿಂದ ಮಾಡಿಕೊಳ್ಳಲಿಲ್ಲ ಎಂದು ತಿಳಿಸಿರುತ್ತಾರೆ . ಐಟಂ ನಂ 7 ರಿಂದ 16 ಸ್ವತ್ತುಗಳಿಗೆ ಸಂಬಂದಪಟ್ಟಂತೆ ಆಗಿರುವ ದಾಖಲೆಗಳನ್ನು ನಾನು ಯಾವುದೇ ಇಲಾಖೆಯಲ್ಲಾಗಲೀ , ನ್ಯಾಯಲಯದಲ್ಲಿ ಪ್ರಶ್ನಿಸಿಲ್ಲ ಎಂದರೆ ಸಾಕ್ಷಿ 2020 ರಲ್ಲಿ ಈ ಪ್ರಕರಣ ಹಾಕಿದ್ದೇನೆ ಎಂದು ತಿಳಿಸಿರುತ್ತಾರೆ . ಐಟಂ ನಂ 7 ರಿಂದ 16 ಸ್ವತ್ತುಗಳಿಗೆ ವಾರ್ಷಿಕವಾಗಿ ಎಷ್ಟು ಕಂದಾಯ ಎಂದು ನನಗೆ ನೆನಪಿಲ್ಲ. ಕಾರಣ ಕಂದಾಯವನ್ನು ಒಂದನೇ ಪ್ರತಿವಾದಿಯೇ ಕಟ್ಟುತಿದ್ದರು ಮತ್ತು ಅವರೇ ನಿರ್ವಹಿಸುತಿದ್ದರು .

ಐಟಂ ನಂ 7 ರಿಂದ 16 ಆಸ್ತಿಗಳು ಇಂದ್ರಾಳಿ Railway station ಪಾರ್ಕಿಂಗ್ ಎರಿಯಾದ ಎದುರುಗಡೆ ಇದೆ ಎಂದರೆ ಸರಿ. Railway station ಪಾರ್ಕಿಂಗ್ ಎರಿಯ ಮತ್ತು ಈ ಆಸ್ತಿಗಳ ನಡುವೆ ಒಂದು ದೊಡ್ಡ ಚರಂಡಿ/ ತೋಡು ಇದೆ ಎಂದರೆ ಸರಿ . ಸದ್ರಿ ತೋಡಿಗೆ ನನ್ನ ಅಣ್ಣ ಅನುಮತಿ ಪಡೆದು ಸೇತುವೆಯನ್ನು ನಿರ್ಮಿಸಿದ್ದಾರೆ ಎಂದರೆ ಸಾಕ್ಷಿ ನಾವು ನಿರ್ಮಿಸಿದ್ದೇವೆ ಎಂದು ತಿಳಿಸಿರುತ್ತಾರೆ . ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ Railway ಯವರು ಸೇತುವೆ ಕಟ್ಟಲು ಅನುಮತಿ ನೀಡಿದ ಪತ್ರ ಎಂದು ತಿಳಿಸಿದ್ದು , ಅದನ್ನು ನಿಡಿ 12 ಎಂದು ಗುರುತಿಸಲಾಯಿತು. ಕೊಂಕಣ ರೆಲ್ವೆಗೆ ಈ ಬಗ್ಗೆ ಎಷ್ಟು ಹಣ ಕಟ್ಟಲಾಯಿತು ಎಂದು ನೆನಪಿಲ್ಲ . 2,86,000 ಹಣವನ್ನು ಕಟ್ಟಿದ ಬಗ್ಗೆ ರಸೀದಿ ಮತ್ತು ಪತ್ರ/ ಹಿಂಬರಹ ಅಲ್ಲವೇ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಹೌದು ಎಂದು ತಿಳಿಸಿ ಅದನ್ನು ನಮ್ಮ ಮನೆಯ ಹಣದಿಂದಲೇ ಕಟ್ಟಲಾಗಿದೆ ಎಂದು ತಿಳಿಸಿರುತ್ತಾರೆ . ಸದ್ರಿ ರಸೀದಿ ಮತ್ತು ಪತ್ರ/ ಹಿಂಬರಹ ವನ್ನು ನಿಡಿ 13 ಮತ್ತು 14 ಎಂದು ಗುರುತಿಸಲಾಯಿತು . ಈ ಹಣವನ್ನು ಕೂಡ ಕುಟುಂಬದ ಹಣದಿಂದ ಕೊಡಲಾಗಿದೆ ಎನ್ನುವ ಬಗ್ಗೆ ನನ್ನ ಬಳಿ ದಾಖಲೆ ಇಲ್ಲ ಆದರೇ ಒಂದನೇ ಪ್ರತಿವಾದಿ ಮತ್ತು ನಮಗೆ ಯಾವುದೇ ಆದಾಯ ಇರಲಿಲ್ಲ. ಆದ್ದರಿಂದ ಕುಟುಂಬದ ಹಣದಿಂದಲೇ ಕೊಡಲಾಗಿದೆ ಎಂದು ತಿಳಿಸಿರುತ್ತಾರೆ .

**ಈ ಹಂತದಲ್ಲಿ ಪಾಟೀ ಸವಾಲಗೆ ಕಾಲವಕಾಶ ಕೋರಿದ್ದು , ನೀಡಲಾಯಿತು**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸ ಇದೆ ಎಂದು ಒಪ್ಪಿದರು

ಪ್ರ. ಹಿ. ಸಿ. ನ್ಯಾ ಉಡುಪಿ.

ಒ.ಎಸ್.  - 34/2020

ಪಿ.ಡಬ್ಲ್ಯು - 01